Providing Electricity to the Harijan Basthies of Maliyur Village.

539 SRI M.H. JAYAPRAKASH NARAYAN (Sirsi).—Will the Minister of State for Information and Power be pleased to state :—

(*a*) whether it is a fact that on 15th August, 1975, Sri K. Nanjaiah and other Harijans of Maliyur Village have represented to Government for providing rural electrification facilities under Goverament of India Scheme to Harijan Basthies of Maliyur Village ;

(*b*) whether it is not a fact that the Village Panchayat Chairman has already sent the required resolution in order to comply with the Board resolutions to extend rural electrification ;

(*c*) if so, the reason, why the Executive Engineer (Elec.) Rural Area Division, Mysore has not taken timely action to provide street lights to Harijan Basthies even though there is specific Circular Order to that affect ;

(*d*) whether Government has any proposal to electrify the village on top priority basis during the current year ?

SRI B. SUBBAIAH SHETTY (Minister of State for Information and Power).—

(*a*) Yes.

(*b*) It is a fact.

(*c*) Maliyur Village is not included either in the approved Village Electrification Programme or in the list of Harijan Basthies sanctioned by Rural Electrification Corporation, New Delhi, for electrification.

(*d*) No.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.—ಈ ವಿಚಾರದಲ್ಲಿ ಕೇಂದ್ರ ಸರ್ಕಾರದಿಂದ ಸರ್ಕ್ಯುಲರ್ ಯಾವಾಗ ಬಂತು ಮತ್ತು ಅದರ ಪ್ರಕಾರ ಎಷ್ಟು ಬಸ್ತಿಗಳನ್ನು ಪಟ್ಟಿ ಮಾಡಿದ್ದೀರಿ ?

ಶ್ರೀ ಬಿ. ಸುಬ್ಬಯ್ಯ ಶೆಟ್ಟಿ.—15 ಜಿಲ್ಲೆಗಳಲ್ಲಿ 14 ಸ್ಕೀಮ್‌ಗಳನ್ನು ರೂರಲ್ ಎಲೆಕ್ಟ್ರಿಫಿಕೇಷನ್ ಕಾರ್ಪೊರೇಷನ್, ನ್ಯೂ-ಡೆಲ್ಲಿ, ಇವರು ಮಂಜೂರು ಮಾಡಿದ್ದಾರೆ ಅದರ ಪ್ರಕಾರ 38 274 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿ 687ಹರಿಜನ ಬಸ್ತಿಗಳಿಗೆ ಎಲೆಕ್ಟ್ರಿಫಿಕೇಷನ್ ಮಾಡಿದೆ.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.—ಕೇಂದ್ರ ಸರ್ಕಾರದವರು ಕಳುಹಿಸಿಕೊಟ್ಟಿರುವ ಸರ್ಕ್ಯುಲರ್ ಪ್ರಕಾರ ಒಂದು ಪಟ್ಟಿಯನ್ನು ತಯಾರಿಸುವಾಗ ಈ ಮಲಿಯೂರು ಗ್ರಾಮದ ಹರಿಜನ ಕಾಲೋನಿಯನ್ನು ಬಿಟ್ಟು ಬಿಡಲು ಕಾರಣವೇನು ? ಈ ಒಂದು ಸರ್ಕ್ಯುಲರ್ ಬರುವುದಕ್ಕೂ ಮೊದಲಿನಿಂದಲೂ ಅವರು ಈ ಬಗ್ಗೆ ಕೇಳುತ್ತಿರಲಿಲ್ಲವೇ ? ಈಗ ಮೈನ್ ವಿಲೇಜ್ ಎಲೆಕ್ಟ್ರಿಫಿಕೇಷನ್ ಫೆಸಿಲಿಟೀಸ್ ಇದೆ. ಆದರೆ ಅಲ್ಲಿಯ ಕಾಲೋನಿಗೆ ಇನ್ನೂ ವಿದ್ಯುಚ್ಛಕ್ತಿ ಒದಗಿಸದಿರಲು ಕಾರಣವೇನು ? ಅಲ್ಲಿಯ ಸೂಪರಿಂಟೆಂಡಿಂಗ್ ಇಂಜಿನಿಯರ್ ಅವರು ಈ ಕೆಲಸ ಮಾಡಿಸುತ್ತೇವೆಂದು ಹೇಳುತ್ತಿದ್ದಾರೆ.

ಆದರೆ ಇಲ್ಲಿ ನನ್ನ ಮೂರನೇ ಪ್ರಶ್ನೆಗೆ ಉತ್ತರ ಕೊಡುತ್ತಾ ಈ ಪಟ್ಟಿಯಲ್ಲಿ ಮಲಿಯೂರು ಗ್ರಾಮವಂದವನ್ನು ಸೇರಿಸಿಲ್ಲವೆಂದು ಹೇಳಿದ್ದೀರಿ. ಅಂದರೆ ಅಲ್ಲಿಗೆ ವಿದ್ಯುಚ್ಛಕ್ತಿ ಸಿಗುವುದಿಲ್ಲವೆಂದಂ ಅರ್ಥವಾಗುತ್ತದೆ. ಮೈನ್ ಲೈನ್‌ಜಿಗೆ ವಿದ್ಯುಚ್ಛಕ್ತಿ ಸರಬರಾಜನ್ನು ಕೊಟ್ಟಿರುವುದರಿಂದ ಆ ಹರಿಜನ ಬಸ್ತಿಗೂ ಅದನ್ನು ಮುಂದುವರೆಸುವುದು ಬಹಳ ಸುಲಭ. ಆದ್ದರಿಂದ ಇದನ್ನು ಆದಷ್ಟು ಜಾಗ್ರತ ಪರಿಶೀಲನೆ ಮಾಡಿ ಮಾಡಿಸಿಕೊಡುತ್ತೀರಾ ?

ಶ್ರೀ ಬಿ. ಸುಬ್ಬಯ್ಯಶೆಟ್ಟಿ.—ಆಗಬಹುದು, ಅದನ್ನು ಪರಿಶೀಲನೆ ಮಾಡುತ್ತೇನೆ.

Expenditure on Asphalting of Roads in Marconhally Agricultural Colony

551. SRI M. H. JAYAPRAKASH NARAYAN (Sirsi).—Will the Minister for Public Works be pleased to state :—

(*a*) the estimated cost of asphalting the Marconahally Agricultural Colony Village limits of P.W.D. road passing through M.A. Colony and Kunigal Taluk ;

(*b*) the total amount spent so far for asphalating for this road ;

(*c*) the revised estimate prepared by the Executive Engineer, Tumkur, to complete the incomplete works of three furlong to link two channel bridges on either side of the village ;

(*d*) when this long pending work is expected to be completed ?

SRI M. MALLIKARJUNA SWAMY (Minister for Public Works).—

(*a*) Rs. 19,000.

(*b*) Rs. 16,000 spent upto end of April, 1977.

(*c*) Nil.

(*d*) After the rainy season of current year.

ಶ್ರೀ ಎಂ ಎಚ್. ಜಯಪ್ರಕಾಶ್ ನಾರಾಯಣ್.—ಮಾರ್ಕೋನಹಳ್ಳಿ ವ್ಯವಸಾಯ ಕಾಲೋನಿ ಬಳಿ ಇರತಕ್ಕಂಥ ಶಿಂಷಾ ನದಿಗೆ ಒಂದು ಪಿಕಪ್ ಆನ್ನು ಚಂದನಹಳ್ಳಿ ಹತ್ತಿರ ಸರ್. ವಿಜರ್ವಾ ಕಾಲದಲ್ಲಿ ಕಟ್ಟಲಾಗಿತ್ತು. ಆದರೆ ಅದು ಇಲ್ಲಿಯವರೆಗೆ ದುರಸ್ತಿಯಾಗಿಲ್ಲ. ಈ ರಸ್ತೆಗೆ ಟಾರು ಹಾಕುವ ಕೆಲಸದ ಬಗ್ಗೆ ಎರಡು ವರ್ಷಗಳ ಹಿಂದೆ ಅಂದಾಜು ಮಾಡಿಸಿ ಕೆಲಸವನ್ನು ಸಹ ಮಾಡಿಸಿದ್ದೀರಿ. ಸಂತೋಷ ಆದರೆ ಉಳಿದ ಕೆಲಸವನ್ನು ಯಾವಾಗ ಮಾಡಿ ಮುಗಿಸುತ್ತೀರಿ ? ಈಗ ಅಲ್ಲಿ ಟಾರ್ ಡಬ್ಬಗಳು ಮತ್ತು ಇತರೇ ಮೆಟೀರಿಯಲ್ಸ್ ಬಿದ್ದಿವೆ ಅವು ವೇಸ್ಟ್ ಆಗುತ್ತಿವೆ. ಆದ್ದರಿಂದ ಅಲ್ಲಿನ ಅಧಿಕಾರಿಗಳಿಗೆ ತಾವು ಸೂಚನೆ ಕೊಟ್ಟು ಬಾಕಿಕೆಲಸವನ್ನು ಪೂರೈಸುವುದಕ್ಕೆ ವ್ಯವಸ್ಥೆ ಮಾಡುತ್ತೀರಾ?

ಶ್ರೀ ಎಂ ಮಲ್ಲಿಕಾರ್ಜುನಸ್ವಾಮಿ.—ಈ ಮಳೆಗಾಲ ಮುಗಿದ ನಂತರ ಉಳಿದ ಎರಡು ಫರ್ಲಾಂಗ್ ಕೆಲಸವನ್ನು ಮಾಡಿಸಲಾಗುತ್ತದೆ.

ಅಧ್ಯಕ್ಷರು.—ಇಲ್ಲಿಗೆ ಪ್ರಶ್ನೆಗಳು ಮುಗಿದವು.